ಕೊಬ್ಬಿ ಮೆರೆಯುತ್ತಿದ್ದ ಕಾಲದಲ್ಲಿ ಮನೆಯಲ್ಲಿ ಹಸುಗಳು ಇದ್ದವು. ಹುಲ್ಲೂ ಇದ್ದವು. ಹುಲ್ಲಿನ ಕಟ್ಟುಗಳನ್ನು ಅಲ್ಲೇ ಜೋಡಿಸಿಡುವುದು ವಾಡಿಕೆ. ಅವನ ತಾತನ ಆಟವೆಲ್ಲಾ ಮುಗಿದ ಮೇಲೆ ಅಪ್ಪನ ಕಾಲದಲ್ಲಿ ನಾಲ್ಕು ಬೇಲಿ ಜಮೀನು ಒಂದು ಬೇಲಿಯಾಯಿತು. ಅವನ ಅಪ್ಪ ತಿಂದೇ ತೇಗಿದರು. ಈಗ ಇರುವುದು ಹಿತ್ತಲಲ್ಲಿರುವ ಮುಳ್ಳಿನ ಬೇಲಿ ಅಷ್ಟೇ. ಮನೆ ಏನೋ ಉಳಿದಿದೆ!

ಅವನು ಹುಲ್ಲಿನ ಕೋಣೆಯನ್ನು ದಾಟಿ ಮುಂದೆ ಹೋಗಲು ಪ್ರಯತ್ನಿಸಿದಾಗ, 'ಹಾಗೆಯೇ ಬಾವಿ ಕಟ್ಟೆಯ ಬಳಿ ಸ್ನಾನ ಮಾಡಿ ಹೋಗಿ!' ಎಂಬ ಧ್ವನಿ ಕೇಳಿಸಿತು. ಮಡದಿಯ ಆಜ್ಞೆ.

'ಯಾಕೆ?'

'ಯಾಕಾ? ಅದೇ ಹೇಳಿದ್ನಲ್ಲಾ ರುಕ್ಕು ಅಡಿಗೆ....'

'ವೈದೇಹಿ ಎಲ್ಲಿ?'

'ಮಗು ಅಲ್ವೇ, ನಾನೂ ಹೋಗ್ತೀನಮ್ಮಾ ಅಂದ್ಳು. ತರಕಾರಿ ಹೆಚ್ಚಿ ಕೊಟ್ರೇ, ಅಭಿರಾಮಿ ಮಾಮಿ ಅನ್ನ ಹಾಕಲ್ವೇನು?' ಹಗ್ಗದಲ್ಲಿ ಒಣಗಲು ಹಾಕಿದ್ದ ಮಾಸಿದ ಪಂಚೆಯನ್ನು, ಟವಲನ್ನು ತೆಗೆದುಕೊಂಡು ಬಾವಿಕಟ್ಟೆಯ ಬಳಿ ಹೋದ ರಾಜಪ್ಪ. ರಾಟೆಯಲ್ಲಿ ಹಗ್ಗ ಇರಲಿಲ್ಲ.

'ಹಗ್ಗ ಎಲ್ಲೇ?'

'ಮೊದಲೇ ಹಿಂಜೋಗಿತ್ತು. ನಿನ್ನೆ ಸಂಜೆ ಹಾಗೆ ತುಂಡು ತುಂಡಾಗಿ ಹೋಯ್ತು. ಅಲ್ಲಿ ನೋಡಿ ಉಳಿದಿರೋದು ಒಂದು ಮೊಳ ಅಷ್ಟೇ. ಅದೂ ಸಮಯಕ್ಕೆ ಬೇಕಾದೀತು ಅಂತ ಇಟ್ಟಿದ್ದೀನಿ.'

'ಯಾರಿಗೆ ಬೇಕಾದೀತು? ನನಗಾ?'

'ನಿಮಗೆ ಯಾಕೆ ಬೇಕಾಗುತ್ತೆ? ನನಗೇ. ಈ ರೀತಿ ಸಂಸಾರ ನಡಸೋದಕ್ಕಿಂತ...'

'ನನ್ನನ್ನ ಏನ್ಮಾಡು ಅಂತೀಯೇ?'

'ಬ್ರಾಹ್ಮಣಾರ್ಥವನ್ನ ನಂಬಿಕೊಂಡು ಸಂಸಾರ ನಡೆಸಲಿಕ್ಕೆ ಸಾಧ್ಯವೇ? ಒಂದು ಅಂಗಡಿಯಲ್ಲಿ ಹೋಗಿ ಲೆಕ್ಕನಾದರೂ ಬರೀಬಹುದಲ್ಲಾ.'

'ಯಾರೇ ಕೆಲ್ಸಾ ಕೊಡ್ತಾರೆ? ನಾನೇನು ಲೆಕ್ಕ ಬರೆಯೋದಿಲ್ಲಾಂತಾ ಹೇಳಿದ್ನೇ?'

'ಐವತ್ತು ವರ್ಷದವರೆಗೂ ಕೆಲ್ಸ ಮಾಡ್ದೇ ಕೂತಿದ್ದು, ಈಗ ಕೆಲ್ಸ ಕೊಡು ಅಂದ್ರೆ ಯಾವನ್ ಕೊಡ್ತಾನೇ? ನಮ್ಮ ಅದೃಷ್ಟಕ್ಕೆ ಯಾರ ಮನೇಲೂ ಒಂದು ತಿಂಗಳಿಗೆ ಶ್ರಾದ್ಧ ಇಲ್ಲ.'

'ಆಗಲೇ ವಿಚಾರಿಸಿ ಬಿಟ್ಯಾ?'

'ಹೌದು, ಮನೆ ಮನೆಗೆ ಹೋಗಿ, ನಿಮ್ಮ ಮನೆಯಲ್ಲಿ ಯಾವಾಗ ಶ್ರಾದ್ಧಾಂತ ವಿಚಾರಿಸ್ದೇ. ಕೇಳೋದು ನೋಡು. ಆವತ್ತು ಕುಪ್ಪು ಮೇಷ್ಟ್ರು ಬಂದಿದ್ರು, ಹೇಳಿದ್ರು.'

'ಸರಿ, ಅದು ಬಿಟ್ಹಾಕು. ಈಗ ಹೇಗೆ ಸ್ನಾನ ಮಾಡೋದು.'

